ಎಂದು ಪುಟ್ಟಿ ಹೇಳಿದಳು. ಅವರೆಲ್ಲ 'ಆಗಲಿ ಅಕ್ಕಾ, ನಾವು ಏನು ಮಾಡಬೇಕು ಎಂದು ನೀನು ಹೇಳು. ನಾವೆಲ್ಲರೂ ಹಾಗೆ ಮಾಡುತ್ತೇವೆ' ಎಂದು ಒಕ್ಕೊರಲಿನಿಂದ ಒಪ್ಪಿದವು.

ಪುಟ್ಟಿ ಪ್ರತಿಯೊಬ್ಬರಿಗೂ ಏನೇನು ಮಾಡಬೇಕು ಎಂದು ಎರಡೆರಡು ಬಾರಿ ಹೇಳಿದಳು. ಅವುಗಳೆಲ್ಲ 'ಗೊತ್ತಾಯಿತು' ಎಂದು ತಲೆ ಆಡಿಸಿದವು. ಅನಂತರ ತಾವು ಯಾವಾಗ ಏನು ಮಾಡುತ್ತೇವೆ ಎಂದು ಕ್ರಮವಾಗಿ ಒಮ್ಮೆ ಹೇಳಿದವು. ಎಲ್ಲರೂ ಖುಷಿಯಿಂದ ಹೈ ಫೈವ್ ಮಾಡಿ ಅಲ್ಲಿಂದ ಹೊರಟರು.

ಮಾರನೆಯ ದಿನ ಮರ ಕಡಿಯಲು ಐದಾರು ಜನರು ಬಂದರು. ತಮ್ಮ ಸಲಕರಣೆಗಳನ್ನು ಹೊರ ತೆಗೆದು ಜನರೇಟರ್ ಪ್ರಾರಂಭಿಸಲು ನೋಡಿದರು. ಏನು ಮಾಡಿದರು ಅದು ಓಡಲೇ ಇಲ್ಲ. ಡೀಸೆಲ್ ಇದೆಯೇ ಎಂದು ನೋಡಿದರು. ಅದರ ತೊಟ್ಟಿಯ ಭರ್ತಿ ನೀರು ತುಂಬಿತ್ತು. ಪಕ್ಕದಲ್ಲಿದ್ದ ದೊಡ್ಡ ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಕೂಡ ಡೀಸೆಲ್ ಬದಲು ನೀರು ತುಂಬಿಕೊಂಡಿತ್ತು. ಹಿಂದಿನ ದಿನ ಅಂಗದ ತೊಟ್ಟಿಯ ಮುಚ್ಚಳ ತೆಗೆದಿದ್ದ. ಅಂಬಾರಿ ಹೀರಿ ತಂದ ನೀರನ್ನು ತನ್ನ ಸೊಂಡಿಲಿನಿಂದ ಜೋರಾಗಿ ತೊಟ್ಟಿಯೊಳಗೆ ಊದಿತ್ತು. ಅದರಿಂದ ಡೀಸೆಲ್ ಆಚೆಗೆ ಚೆಲ್ಲಿ ಹೋಗಿತ್ತು. ಕ್ಯಾನುಗಳಲ್ಲೂ ಡೀಸೆಲ್ ಬದಲು ಭರ್ತಿ ನೀರು ತುಂಬಿಕೊಂಡಿತ್ತು. ಅನಂತರ ಅಂಗದ ಮುಚ್ಚಳವನ್ನು ಬಿಗಿಯಾಗಿ ಮುಚ್ಚಿಬಿಟ್ಟಿತ್ತು.

ಮರಗಳನ್ನು ಕಡಿದುಹಾಕಲು ಬಂದವರು 'ಅಯ್ಯೋ ಈ ಕಾಡಿನಲ್ಲಿ ಡೀಸೆಲ್ ಎಲ್ಲಾ ನೀರಾಗಿ ಹೋಗಿದೆ. ಇದು ಹೇಗೆ ಸಾಧ್ಯ?' ಎಂದು ಗಲಿಬಿಲಿಯಾದರು. ಆ ಕ್ಷಣದಲ್ಲಿ ಹಸಿರುಪಕ್ಕೆ ಗಿಣಿಮರಿ ತನ್ನ ಬಳಗ ಮತ್ತು ಇತರ ಪಕ್ಷಿಗಳೊಂದಿಗೆ ಅವರನ್ನು ಕುಕ್ಕುವಂತೆ ಒಟ್ಟಿಗೆ ಆಕ್ರಮಣ ಮಾಡಿದವು. ಇದ್ದಕ್ಕಿದ್ದಂತೆ ಆದ ಆಕ್ರಮಣಕ್ಕೆ ಬೆದರಿದ ಅವರೆಲ್ಲರೂ ಕಡಿದುಹಾಕಿದ್ದ ಮರದ ಕಡೆ ಓಡಿದರು. ಅವರಲ್ಲಿ ಇಬ್ಬರಿಗೆ ಒಂದು ಮರದ ಕೆಳಗೆ ಇದ್ದ ಪುಟ್ಟ ಬಂಡೆಗಳ ಜೋಡಣೆ ಕಾಣಿಸಿತು. ದೊಡ್ಡ ಕೆಂಪು ಕಣ್ಣುಗಳ, ಚಾಚಿದ ಕೆಂಪು ನಾಲಗೆಯ ಚಿತ್ರವನ್ನು ನೋಡುತ್ತಿದ್ದಂತೆ ಅವರಿಗೆ ಅದು ದೇವಿಯ ವಿಗ್ರಹ ಎಂದು ಗೊತ್ತಾಗಿ ಹೋಯಿತು.

'ಅಯ್ಯೋ! ಇದು ದೇವರಕಾಡು! ಇಲ್ಲಿ ಮರಗಳನ್ನು ಕಡಿಯಬಾರದು...' ಎಂದು ಜೋರಾಗಿ ಹೇಳುತ್ತಾ ಕೈಮುಗಿದು ನಿಂತರು. ಆಗ ಇದ್ದಕ್ಕಿದ್ದಂತೆ ಮರಗಳ ಮೇಲಿಂದ ಸಣ್ಣ ಸಣ್ಣ ಕಲ್ಲುಗಳು ಅವರ ಕಡೆ ತೂರಿ ಬಂದವು. ಏನಾಗುತ್ತಿದೆ ಎಂದು ಅರ್ಥವಾಗದೇ ಅವರು ಹಿಂದಕ್ಕೆ ಓಡಲು ನೋಡಿದರು. ಅವರ ಎಡ ಮತ್ತು ಬಲಭಾಗಗಳಿಂದ ನೂರಾರು ಹಾವುಗಳು ಒಟ್ಟಿಗೆ ತಲೆಯೆತ್ತಿ, ಹೆಡೆ ಬಿಚ್ಚಿ 'ಬುಸ್‌ಸ್...' ಎನ್ನುತ್ತಾ ಇವರುಗಳನ್ನು ನೋಡಿದವು.

'ಅಮ್ಮಾ, ತಾಯಿ... ತಪ್ಪಾಯಿತು. ಇನ್ನು ಈ ದೇವರಕಾಡಿನ ಕಡೆಗೆ ನಾವು ಬರುವುದಿಲ್ಲ' ಎಂದು ಹೇಳಿ, ತಮ್ಮ ಸಲಕರಣೆಗಳನ್ನು ತೆಗೆದುಕೊಂಡು ಓಡಿ ಹೋದರು. ಅವರು ಓಡುವುದನ್ನು ಕಲ್ಲು ಎಸೆಯಲು ಮರಗಳಲ್ಲಿ ಅವಿತ್ತಿದ್ದ ಅಂಗದನ ಬಳಗದವರೆಲ್ಲರೂ ನೋಡಿದವು. ಕುಕ್ಕುವಂತೆ ಆಕ್ರಮಣ ಮಾಡಿ ಮರಗಳ ರೆಂಬೆಗಳ ಮೇಲೆ ಕುಳಿತಿದ್ದ ಹಸಿರು ಪಕ್ಕೆಯ ಬಂಧುಗಳ, ಗೆಳೆಯರ ಗುಂಪು ಕೂಡ ನೋಡಿದವು. ಹಾವುಗಳನ್ನು ಕರೆ ತಂದಿದ್ದ ಕಲಾಮೊಲದ ಕುಲದವರೆಲ್ಲ ಆ ಹಾವುಗಳ ಹಿಂದೆ ತಮ್ಮ ಹಿಂಗಾಲುಗಳ ಮೇಲೆ ತಲೆಯೆತ್ತಿ ನಿಂತು ವೀಕ್ಷಿಸಿದವು. ಸ್ವಲ್ಪ ದೂರದಲ್ಲಿ ಯಾರಿಗೂ ಕಾಣದಂತೆ ಅವಿತುಕೊಂಡಿದ್ದ ಅಂಬಾರಿಯ ಹಿಂಡಿನವರೆಲ್ಲ ಖುಷಿಯಿಂದ ಒಟ್ಟಿಗೇ ಘೀಳಿಟ್ಟವು.

ಪುಟ್ಟಿ ಹೇಳಿದ್ದನ್ನೆಲ್ಲ ಅವಳ ಕಾಡಿನ ಗೆಳೆಯರು ಚಾಚೂತಪ್ಪದೇ, ಸಮಯವನ್ನು ಅನುಸರಿಸಿ ಮಾಡಿದ್ದರು. ಅವರ ಒಗ್ಗಟ್ಟಿನಿಂದ ಅವರೆಲ್ಲರ ಅನ್ನ ನೀಡುವ ಕಾಡಿನ ಆ ತಾಣ ಉಳಿದುಕೊಂಡಿತು. ಅಲ್ಲಿ ಪುಟ್ಟಿ ಕಟ್ಟಿದ ದೇವರಕಾಡು ಸುಸ್ಥಿರವಾಯಿತು. ಪುಟ್ಟಿಯ ಕಾಡಿನ ಗೆಳೆಯರಿಗೆ ತಾವೆಲ್ಲರೂ ಸೇರಿ ಮಾಡಿದ ಯುಕ್ತಿಯಿಂದ ತಮ್ಮ ಕಾಡು ಉಳಿಯಿತು ಎಂದು ಬಹಳ ಸಂತೋಷವಾಗಿತ್ತು, ಹೆಮ್ಮೆಯಾಗಿತ್ತು. ಪುಟ್ಟಿಯಂಥ ಬುದ್ಧಿವಂತೆ, ಧೈರ್ಯಶಾಲಿ ನಾಡಿನ ಹುಡುಗಿ ತಮ್ಮ ಗೆಳತಿಯಾಗಿರುವುದಕ್ಕೆ ಕಾಡಿನ ಗೆಳೆಯರಿಗೆ ಆನಂದವಾಗಿತ್ತು.

ಈಗ ಆ ಕಾಡಿನಲ್ಲಿ ಮರಗಳನ್ನು ಕಡಿಯಲು ಯಾರೂ ಹೋಗುತ್ತಿಲ್ಲ.

●